ಆ) ಸರ್ಕಾರವು ಬೀಜ ನಿಗಮದ ಮುಖಾಂತರ ಮೂಲ ಬಿತ್ತನೆ ಬೀಜವನ್ನು ಪೂರೈಸುತ್ತಿದೆ. ಹಾಗೂ ಕರಾರಿನಂತೆ ಬೆಳೆದ ಬೀಜವನ್ನು ನಿಗಧಿತ ಬೆಲೆಗೆ ಖರೀದಿಸುತ್ತಿದೆ.

ಇ) ಕಳೆದ 3 ವರ್ಷಗಳು ಪ್ರಮಾಣೀತ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲು ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಬೀಜ ನಿಗಮವು ಹಾಕಿಕೊಳ್ಳಲಾಗಿದ್ದು ಅದರ ಸಾಧನೆಯು ಕೆಳಕಂಡಂತಿದೆ.

ವಿವರಣೆ ಮಾಡಿರುವ ಬಿತ್ತನೆ ಬೀಜ

(ಕ್ವಿಂಟಾಲುಗಳಲ್ಲಿ)

ಬೀಜ	91-92	92-93	93-94
ಏಕದಳ ಧಾನ್ಯಗಳು	58675	54381	67569
ದ್ವಿದಳ ಧಾನ್ಯಗಳು	8073	12423	7991
ಎಣ್ಣೆ ಕಾಳುಗಳು	5909	5922	12274
ಹೈಬ್ರಿಡ್ ಹತ್ತಿ	3591	4685	2622
ಒಟ್ಟು	**76248**	**77411**	**90456**

ಇದಲ್ಲದೆ, ಬೀಜಗಳ ಕೊರತೆ ಕಂಡು ಬಂದಲ್ಲಿ ಅದನ್ನು ಸಹ ಪೂರೈಸಲು ಬೀಜ ನಿಗಮವು ಕ್ರಮ ತೆಗೆದುಕೊಳ್ಳುತ್ತದೆ.

ಈ) ರೈತರಿಂದ ಪ್ರಮಾಣೀತ ಬಿತ್ತನೆ ಬೀಜದ ಬೇಡಿಕೆಯು ಹೆಚ್ಚುತ್ತಿರುವುದನ್ನು ಮನಗಂಡು ಅದನ್ನು ಪೂರೈಸಲು ಅನುಕೂಲವಾಗುವಂತೆ 94-95ನೇ ಸಾಲಿನಲ್ಲಿ "ನೊಂದಾಯಿತ ಬೀಜ ಉತ್ಪಾದಕರಿಗೆ ಉತ್ತೇಜನೆ" ಎಂಬ ಯೋಜನೆಯನ್ನು ರೂಪಿಸಿ ಜಾರಿಗೊಳಿಸಲು ಸರ್ಕಾರವು ಪರಿಶೀಲಿಸುತ್ತಿದೆ. ಇದರಲ್ಲಿ ಪ್ರಮಾಣೀಕೃತ ಬೀಜೋತ್ಪಾದನೆ ತೆಗೆದುಕೊಳ್ಳುವ ರೈತರಿಗೆ ಪ್ರೋತ್ಸಾಹ ಧನ ನೀಡಲು ಯೋಜಿಸಲಾಗಿದೆ. ಇದಲ್ಲದೆ ರೈತರಿಗೆ ಉತ್ತಮ ಗುಣಮಟ್ಟದ ಬೀಜದ ಕೊರತೆ ಕಂಡು ಬರದಂತೆ ನೋಡಿಕೊಳ್ಳಲು 93-94ನೇ ಸಾಲಿನಲ್ಲಿ ಜಾರಿಗೊಳಿಸಿದ "ಬೀಜ ಖರೀದಿ ಹಾಗೂ ಮಾರಾಟ ಯೋಜನೆಯನ್ನು 94-95ನೇ ಸಾಲಿನಲ್ಲಿ ಮುಂದುವರಿಸಲಾಗುತ್ತಿದೆ. ಇದರಿಂದಾಗಿ ಸ್ಥಳೀಯವಾಗಿ ಕೊರತೆ ಕಂಡು ಬರಬಹುದಾದ ಬಿತ್ತನೆ ಬೀಜಗಳನ್ನು ಇತರೆ ಮೂಲಗಳಿಂದ ಖರೀದಿಸಿ ಗುಣಮಟ್ಟದ ಬೀಜಗಳನ್ನು ವಿತರಣೆಗೆ ದೊರಕಿಸಬಹುದಾಗಿದೆ.

ಬೀದರ್ ಜಿಲ್ಲೆಯಲ್ಲಿ ಹಾಪ್‌ಕಾಮ್

394 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಹಾಪ್‌ಕಾಮ್ಸ್ ಕಾರ್ಯನಿರ್ವಹಿಸುತ್ತಿದೆ?

ಆ) ಈ ವ್ಯವಸ್ಥೆಯನ್ನು ಹೈದರಾಬಾದ್ ಕರ್ನಾಟಕ ಪ್ರದೇಶದ ಯಾವ ಯಾವ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು?

ಇ) ಬೀದರ್ ಜಿಲ್ಲೆಯಲ್ಲಿ ಹಾಪ್‌ಕಾಮ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ರಾಜ್ಯದ 7 ಜಿಲ್ಲೆಗಳಲ್ಲಿ ಬೆಂಗಳೂರು (ನಗರ) ಬೆಂಗಳೂರು (ಗ್ರಾಮಾಂತರ) ಕೋಲಾರ, ತುಮಕೂರು, ಮೈಸೂರು, ಮಂಡ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹಾಪ್‌ಕಾಮ್ಸ್ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

ಆ) ಹೈದರಾಬಾದ್ ಕರ್ನಾಟಕ ಪ್ರದೇಶದ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಜಿಲ್ಲೆಗಳಿಗೆ ಹಾಪ್‌ಕಾಮ್ಸ್ ಮಾದರಿಯಲ್ಲಿ ಹಣ್ಣು ತರಕಾರಿ ಮಾರುಕಟ್ಟೆ ಸೌಲಭ್ಯವನ್ನು ವಿಸ್ತರಿಸಲು ಯೋಜಿಸಲಾಗಿದ್ದು, ರೂ. 2157.77 ಲಕ್ಷಗಳ ಯೋಜನೆಯನ್ನು ರೂಪಿಸಲಾಗಿದೆ.

ಇ) ಹಾಪ್‌ಕಾಮ್ಸ್ ಮಾದರಿಯಲ್ಲಿ ಬೀದರ್ ಜಿಲ್ಲೆಯಲ್ಲಿ ವ್ಯವಸ್ಥಿತ ಹಣ್ಣು ಮತ್ತು ತರಕಾರಿ ಮಾರಾಟ ಸೌಲಭ್ಯ ಕಲ್ಪಿಸಲು 440.51 ಲಕ್ಷ ರೂ.ಗಳ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ಸೆಂಟ್ರಲ್ ಗೋಡೌನ್, ಮಾರಾಟ ಮಳಿಗೆಗಳು, ಶೀತಲಗೃಹಗಳು ಮತ್ತು ರೆಫ್ರಿಜರೇಟೆಡ್ ವ್ಯಾನುಗಳು ಸೇರಿರುತ್ತದೆ.

1993-94ನೇ ಸಾಲಿನಲ್ಲಿ ಆಹಾರ ಧಾನ್ಯಗಳ ಉತ್ಪಾದನೆ

509 - ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92, 1992-93, 1993-94ನೇ ಸಾಲುಗಳಲ್ಲಿ ರಾಜ್ಯದಲ್ಲಿ ಉತ್ಪಾದನೆ ಆಗಿರುವ ವಿವಿಧ ಆಹಾರ ಧಾನ್ಯಗಳ ಪ್ರಮಾಣ ಎಷ್ಟು?

ಆ) ರಸಗೊಬ್ಬರಗಳ ಬೆಲೆ ಏರಿಸಿರುವುದರಿಂದ ಈ ಉತ್ಪಾದನಾ ಪ್ರಮಾಣದ ಮೇಲೆ ಏನಾದರೂ ಪರಿಣಾಮ ಬೀರಿದೆಯೇ?

ಇ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ರೈತರು ಉಪಯೋಗಿಸುತ್ತಿರುವ ರಸಗೊಬ್ಬರಗಳ ಪ್ರಮಾಣದಲ್ಲಿ ಏನಾದರೂ ಕಡಿಮೆ ಆಗಿದೆಯೇ?

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು) :

ಅ) 1991-92, 1992-93 ಹಾಗೂ 1993-94ನೇ ಸಾಲುಗಳಲ್ಲಿ ರಾಜ್ಯದ ಒಟ್ಟು ಆಹಾರ ಧಾನ್ಯಗಳ ಉತ್ಪಾದನೆ ಕ್ರಮವಾಗಿ 79.01, 84.98 ಹಾಗೂ 84.13 ಲಕ್ಷ ಟನ್‌ಗಳಷ್ಟು ಆಗಿರುತ್ತದೆ.

ಆ) ರಸಗೊಬ್ಬರಗಳ ಬೆಲೆ ಏರಿಕೆಯಿಂದ ರಾಜ್ಯದ ಆಹಾರ ಧಾನ್ಯಗಳ ಸರಾಸರಿ ಇಳುವರಿಯ ಮೇಲೆ ಯಾವ ಪರಿಣಾಮವೂ ಬೀರಿರುವುದಿಲ್ಲ, ಉತ್ಪತ್ತಿಯಲ್ಲಿ ಯಾವ ವಿಧವಾದ ವ್ಯತ್ಯಾಸ ಕಂಡು ಬಂದಿರುವುದಿಲ್ಲ.

ಇ)1991-92ನೇ ಸಾಲಿನಲ್ಲಿ ರೈತರು ಬಳಸಿದ ಪ್ರಮಾಣದಲ್ಲಿ ಕಡಿಮೆ ಆಗಿರುವುದಿಲ್ಲ. ಆದರೆ 1992-93 ಹಾಗೂ 1993-94 ರ ಸಾಲುಗಳಲ್ಲಿ ರೈತರು ಬಳಸಿದ ರಸಗೊಬ್ಬರದ ಪ್ರಮಾಣದಲ್ಲಿ ಕಡಿಮೆ ಆಗಿರುತ್ತದೆ.

ಗೋಡಂಬಿ ಅಭಿವೃದ್ಧಿಗಾಗಿ ವಿಶ್ವಬ್ಯಾಂಕಿನ ಹಣ

150 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗೋಡಂಬಿ ಅಭಿವೃದ್ಧಿಗಾಗಿ ವಿಶ್ವಬ್ಯಾಂಕಿನಿಂದ ಹಾಗೂ ಕೇಂದ್ರ ಸರ್ಕಾರದಿಂದ ಪಡೆದ ನೆರವಿನ ಮೊತ್ತವೆಷ್ಟು? ಹಾಗೂ ಇವುಗಳನ್ನು ಯಾವ ಜಿಲ್ಲೆಗಳಲ್ಲಿ ವಿನಿಯೋಗ ಮಾಡಲಾಗಿದೆ? (1990 ರಿಂದ 1994ರ ಜುಲೈವರೆಗೆ)

ಆ) ರಾಜ್ಯದಲ್ಲಿ ಪ್ರತಿ ಎಕರೆಗೆ ಆಗುತ್ತಿರುವ ಗೋಡಂಬಿ ಉತ್ಪಾದನೆ ಎಷ್ಟು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :